ರಾಜ್ಯದಲ್ಲಿ ನಿಸರ್ಗ ಸಂಪತ್ತಾದ ಗ್ರಾನೈಟ್ ಕಲ್ಲುಗಳ ನಿರ್ನಾಮ ಮಾಡುವುದನ್ನು ತಪ್ಪಿಸಲು ಸಮಗ್ರ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸುವ ಬಗ್ಗೆ.

ಶ್ರೀ ಎಂ. ಪಿ. ವೆಂಕಟೇಶ್.—ಅಧ್ಯಕ್ಷರೆ, ನನಗೆ ಇದರ ಬಗ್ಗೆ ಮಾತನಾಡಲಿಕ್ಕೆ ಒಂದು ಗಂಟೆ ಕಾಲ ಅವಕಾಶ ಕೊಡಬೇಕು.

ಅಧ್ಯಕ್ಷರು.—ಈಗಾಗಲೇ ಈ ರೆಸಲ್ಯೂಷನ್ ಮೇಲೆ ೩ ಗಂಟೆ ೧೨ ನಿಮಿಷ ಡಿಸ್‌ಕಷನ್ ಆಗಿದೆ. ತಾವು ಬೇಗ ಮುಗಿಸಿ. ಇದು ಮುಗಿದ ಮೇಲೆ ಮುಂದಿನ ನಿರ್ಣಯ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಪಾಟಾಳ್ ನಾಗರಾಜ್.—ಅಧ್ಯಕ್ಷರೆ, ಇದು ಪ್ರಮುಖವಾದಂಥ ನಿರ್ಣಯ. ದಯವಿಟ್ಟು ತಾವು ಅವಕಾಶ ಕೊಡಬೇಕು. ರೈತಸಂಘದ ನಾಯಕರುಗಳು ಇದರ ಬಗ್ಗೆ ಮಾತನಾಡಬೇಕಾಗಿದೆ. ಮತ್ತು ಮಾನ್ಯ ಶಿವರಾಮೇಗೌಡರು ಮಾತನಾಡಬೇಕಾಗಿದೆ.

ಅಧ್ಯಕ್ಷರು.—ಮಾನ್ಯ ವೆಂಕಟೇಶ್ ಅವರು ೫–೧೦ ನಿಮಿಷಗಳಲ್ಲಿ ಮುಗಿಸಬೇಕು.

† ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) —ಮಾನ್ಯ ಅಧ್ಯಕ್ಷರೇ, ಈ ಕರಿಕಲ್ಲು ಮತ್ತು ಇತರೆ ಕಲ್ಲು ರಾಷ್ಟ್ರೀಕರಣ ರ್ಗಿಲರಲ್ಲಿ ಮಾಡಿದ್ದನ್ನು ಸರ್ಕಾರ ಸಡಿಲಗೊಳಿಸಿ ಒಂದು ಅಮೆಂಡ್‌ಮೆಂಟ್ ತಂದು, ಫ್ಯಾಕ್ಟರಿ ಇಟ್ಟಿರುವವರಿಗೆ, ಪಾಲಿಷಿಂಗ್ ಯೂನಿಟ್ ಯಾರು ಹಾಕಿರುತ್ತಾರೆ ಅಂತಹವರಿಗೆ ಮೊದಲನೆಯ ಆದ್ಯತೆಯನ್ನು ಮತ್ತು ಯಾರು ಈಗಾಗಲೇ ಇರಲಿಕ್ಕೆ ಫ್ಯಾಕ್ಟರಿ ಸ್ಥಳ ಕಾದಿರಿಸಿರುತ್ತಾರೆ, ಆ ಫ್ಯಾಕ್ಟರಿಗೆ ಸಂಬಂಧಪಟ್ಟಂತೆ ಆರ್ಡರ್ ಮಾಡಿರುತ್ತಾರೆ, ಅಂತಹವರಿಗೆ ಎರಡನೆಯ ಆದ್ಯತೆ ಕೊಡುವಂತಾದ್ದು, ಮೂರನೆಯದು ಫ್ಯಾಕ್ಟರಿ ಮಾಡುತ್ತೇವೆ ಎನ್ನುವವರಿಗೂ ಮೂರನೇ ಆದ್ಯತೆ ಕೊಡುತ್ತೇವೆಂದು ನಮೂದು ಮಾಡಿದ್ದಾರೆ. ಕಳೆದ ಅಧಿವೇಶನದಲ್ಲಿ ಈ ಫ್ಯಾಕ್ಟರಿ ಪ್ರಾರಂಭ ಮಾಡುವುದಕ್ಕಿಂತಲೂ ಮೊದಲೇ ಒಬ್ಬೊಬ್ಬರು ಹತ್ತತ್ತು ಫ್ಯಾಕ್ಟರಿಗಳನ್ನು ಮಾಡಿಕೊಂಡಿದ್ದಾರೆ. ಬೇರೆ ಬೇರೆ ಬೇನಾಮಿ ಹೆಸರಿನಲ್ಲಿ, ಸಂಬಂಧಿಗಳ ಹೆಸರಿನಲ್ಲಿ ೧೦ ಫ್ಯಾಕ್ಟರಿಗಳನ್ನು ಮಾಡಿಕೊಂಡಿದ್ದಾರೆ. ಹಿಂದಿನ ಸರ್ಕಾರ ಇದ್ದಾಗ ಅವರ ಜೊತೆ ಶಾಮೀಲಾಗಿ ಈ ರೀತಿ ಮಾಡಬೇಕೆಂದು ಪಟ್ಟಿ ಮಾಡಿಕೊಂಡು ನನ್ನೇನು ಮುಂಜೂರಾತಿ ಮಾಡುದ ಸಂದರ್ಭ ಇದ್ದಾಗ ಆ ಸರ್ಕಾರವೇ ಹೋಯಿತು. ಈಗ ಹೊಸ ಸರ್ಕಾರ ಬಂದಿದೆ. ಇವರ ಹತ್ತಿರವೂ ಅವರು ಬರುವ ಸಂದರ್ಭ ಇದೆ, ಇನ್ನು ಕನಕಪುರದ ಹತ್ತಿರ ಲಕ್ಷಾಂತರ ರೂಪಾಯಿ ಕಲ್ಲು ಲೂಟಿ ಮಾಡಿ ಹೊರ ದೇಶಕ್ಕೆ ಕಳುಹಿಸಿದ್ದಾರೆ. ಅದರ ಬಗ್ಗೆ ಇನ್ನೂ ಸಂಪೂರ್ಣವಾದ ತನಿಖೆಯಾಗಿಲ್ಲ ಯಾರು ಕಲ್ಲುಗಳನ್ನು ಕಳ್ಳತನ ಮಾಡಿದ್ದಾರೆ, ಅವರೇ ನನಗೆ ಆ ಜಾಗ ಬೇಕೆಂದು ಅರ್ಜಿ ಹಾಕಿಕೊಂಡಿದ್ದಾರೆ.

ಇವತ್ತು ಅಲ್ಲಿ ಮುಂಜೂರಾತಿಯನ್ನು ಮಾಡಿದಮೇಲೆ ಇಂತಿಷ್ಟು ಕಳ್ಳತನವಾಗಿ ಹೋಯಿತು ಎಂದು ರೆಕಾರ್ಡ್ ಮಾಡಿ ಹೊಸದಾಗಿ ಅವನಿಗೆ ಲೀಸ್‌ಗೆ ಕೊಡುತ್ತಾರೆ ಆಗ ಅವನ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ ಅಲ್ಲಿ ಕಳ್ಳತನವಾಗಿರುವ ಬಗ್ಗೆ ಇನ್ನೂ ಸಂಪೂರ್ಣವಾಗಿ ತನಿಖೆ ಆಗಿರುವುದಿಲ್ಲ. ಎಷ್ಟೆಷ್ಟು ಲಕ್ಷ ಮೂಲ್ಯದ್ದಾರೆಂದು ಗೊತ್ತಿಲ್ಲ ಮಂಗಳೂರು ಬಂದರಿನಿಂದ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಕಲ್ಲುಹೊರದೇಶಗಳಿಗೆ ಹೋಗಿದೆ ಆದರೆ ಅವರು ಸರ್ಕಾರಕ್ಕೆ ಕೊಟ್ಟಿರತಕ್ಕ ರಾಯಲ್ಟಿ ಬಹಳ ಕಡಿಮೆ ಹೊರದೇಶಗಳಿಗೆ ಹೋಗಿರತಕ್ಕ ಕಲ್ಲಿನ ಬಗ್ಗೆ ಅವರು ಕೊಟ್ಟಿರತಕ್ಕ ಮೊತ್ತ ಮತ್ತು ಸರ್ಕಾರಕ್ಕೆ ಅವರು ಕಟ್ಟಿರತಕ್ಕ ರಾಯಲ್ಟಿಯನ್ನು ನೋಡಿದರೆ 2½ ಪರ್ಸೆಂಟ್ ನಷ್ಟ ಮಾತ್ರ ಕೊಟ್ಟಿದ್ದಾರೆ ಸರ್ಕಾರಕ್ಕೆ ನ್ಯಾಯವಾಗಿ ಏನು ಕೊಡ್ಬೇಂತರ ರೂಪಾಯಿ ಹಣವನ್ನು ಕಟ್ಟಬೇಕಾಗಿತ್ತೋ ಅದನ್ನು ಅವರು ಕಟ್ಟಿಲ್ಲ ಮೈಸೂರ್ ಮಿನರಲ್ಸ್ ಸಂಸ್ಥೆಗೆ 78 ರಿಂದ ಕೆಲಸಮಾಡಿ ಎಂದು ಕೊಟ್ಟಿದರು ಮೈಸೂರು ಮಿನರಲ್ಸ್ ಸಂಸ್ಥೆಯ ಅಧಿಕಾರಿಗಳು ಹೊರದೇಶಕ್ಕೆ ಹೋಗಿ ಅಗ್ರಿಮೆಂಟ್ ಮಾಡಿಕೊಂಡು ಬಂದು ಇಲ್ಲಿ ಕೆಲಸ ಮಾಡತಕ್ಕವರಿಗೆ ಕಡಿಮೆ ರೇಟಿನಲ್ಲಿ ಗುತ್ತಿಗೆ ಕೊಡುತ್ತಿದ್ದರು. ಹೀಗೆ ಅಲ್ಲಿ ಕೆಲಸಗಾರರಿಗೆ ಕೆಲಸ ಮಾಡಲು ಅವಕಾಶ ಆಗದೆ ಕಡಿಮೆ ಬೆಲೆಗೆ ಅವರು ಪ್ರೊಡಕ್ಷನ್ ಮಾಡುವುದಕ್ಕೆ ಆಗದೆ, ಅವರು ಕೆಲಸ ಮಾಡುವುದಕ್ಕಾಗುತ್ತಿಲ್ಲ. ಇಂದಿಗೂ ಸಹ ಎಲ್ಲಿ ಸರ್ಕಾರೀ

ಜಮೀನು ಇದೆ, ಅವರ ಪಕ್ಕದ ಜಮೀನನ್ನು ಲಕ್ಷಾಂತರ ರೂಪಾಯಿ ಕೊಟ್ಟು ತೆಗೆದುಕೊಂಡು, ನಂತರ ಅಲ್ಲಿ ಕಲ್ಲುಗಳನ್ನು ತೆಗೆಸಿ ಬಂದರುಗಳಿಗೆ ತಂದು ಹಾಕಿಕೊಂಡು ಹೊರದೇಶಗಳಿಗೆ ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ. ಈ ವಿಚಾರ ಈ ಸದನದಲ್ಲಿ ಅನೇಕ ಸಾರಿ ಚರ್ಚೆಯಾಗಿದೆ : ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆದರೂ ಕೂಡ ಕಲ್ಲಿನ ಕಳ್ಳತನ ನಿಂತಿಲ್ಲ. ಇನ್ನೂ ಮುಂದುವರಿಯುತ್ತಲೇ ಇದೆ. ೧೯೭೮ರಲ್ಲಿ ರಾಷ್ಟ್ರೀಯವಾದ ಮೇಲೆ ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ತಾಲ್ಲೂಕು, ಯಳಂದೂರು ತಾಲ್ಲೂಕಿನಲ್ಲಿ ಯಾರ್ಯಾರು ಕ್ವಾರಿಗಳಿಗೆ ಅರ್ಜಿಗಳನ್ನು ಹಾಕಿಕೊಂಡಿದ್ದರೋ, ಅದೇ ಜನರಿಗೆ, ಜದೇ ಕ್ವಾರಿಗಳಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿದ್ದಾರೆ. ಮಾನ್ಯ ರಾಜುಗೌಡರ ಕ್ಷೇತ್ರದಲ್ಲಿ ಒಂದು ಕಡೆ ಕ್ವಾರಿ ಜಾಗವನ್ನು ದರ್ಖಾಸ್ತು ಳಿ-ಳಿ ಎಕರೆಯಂತೆ ಮಂಜೂರು ಮಾಡಿದ್ದಾರೆ. ವ್ಯವಸಾಯ ಉದ್ದೇಶಕ್ಕಾಗಿ ಜಮೀನು ಕೊಟ್ಟಿದ್ದಾರೆ. ಇವತ್ತು ಅವರು ಅಲ್ಲಿ ಕಲ್ಲುಗಳನ್ನು ಒಡೆದು ತೆಗೆಯುತ್ತಿದ್ದಾರೆ. ಇದುವರೆಗೆ ಲಕ್ಷಾಂತರ ರೂಪಾಯಿ ಬೆಲೆ ಬೀಳುವ ಕಲ್ಲುಗಳನ್ನು ತೆಗೆದು ಕೊಂಡಿದ್ದಾರೆ. ಅಧಿಕಾರಿಗಳು ಪ್ರಭಾವಶಾಲಿ ವ್ಯಕ್ತಿಗಳಿಗೆ ಆ ಜಮೀನಾನನ್ನು ಮಂಜೂರು ಮಾಡಿದ್ದಾರೆ. ಅಲ್ಲಿನ ತಹಸೀಲ್ದಾರರುಗಳು ಲಕ್ಷಾಂತರ ರೂಪಾಯಿ ತೆಗೆದುಕೊಂಡು ತಮ್ಮ ತಮ್ಮ ಕೆಲಸಗಳಿಗೆ ರಾಜೀನಾಮೆಯನ್ನು ಕೊಟ್ಟು ಹೋಗಿದ್ದಾರೆ. ಇದು ಸಂಪೂರ್ಣವಾಗಿ ತನಿಖೆಯಾಗಬೇಕು. ಕೊಳ್ಳೇಗಾಲ ತಾಲ್ಲೂಕಿನಲ್ಲಿ, ಯಳಂದೂರು ತಾಲ್ಲೂಕಿನಲ್ಲಿ, ಮೈಸೂರು ಜಿಲ್ಲೆಯಲ್ಲಿ ಬ್ಲಾಕ್ ಗ್ರಾನೈಟ್ ಬಹಳವಾಗಿದೆ ಇದೆಲ್ಲಾ ಹೊರದೇಶಗಳಿಗೆ ಎಕ್ಸ್‌ಪೋರ್ಟ್ ಮಾಡುವಂಥಾದ್ದು. ಅಂಥ ಜಾಗಗಳನ್ನು ಲೀಸ್‌ನೇ ಇಸವಿಯಿಂದ ಏತಕ್ಕೆ ಸಾಗುವಳಿಗೆ ಕೊಟ್ಟಿದ್ದಾರೆ, ನಾನು ಮಾನ್ಯ ವಾಟಾಳ್ ನಾಗರಾಜ್‌ರವರು ಮೈಸೂರು ಜಿಲ್ಲಾಧಿಕಾರಿಗಳನ್ನು ಹಲವಾರು ಸಲ ಭೇಟಿ ಮಾಡಿ ಕೇಳಿದ್ದೇವೆ. ನೀವು ವ್ಯವಸಾಯಕ್ಕೋಸ್ಕರ ಏನು ಜಮೀನನ್ನು ಕೊಟ್ಟಿದ್ದೀರಿ. ಆದನ್ನು ಮಾಪಸ್ಸು ತೆಗೆದುಕೊಂಡರೆ ಕೋರ್ಟ್ ನಿಂದ ಸ್ಟೇ ತರತಕ್ಕ ಪ್ರಶ್ನೆಯೇ ಬರುವುದಿಲ್ಲವೆಂದು ಹೇಳಿದರೂ ಕೂಡ ಅವರು ಅದನ್ನು ಗಮನಕ್ಕೆ ತೆಗೆದುಕೊಂಡು ಯಾವುದೇ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಈ ರೀತಿ ಲಕ್ಷಾಂತರ ರೂಪಾಯಿ ಹಣ ಸರ್ಕಾರಕ್ಕೆ ವಂಚನೆಯಾಗಿದೆ. ಮಲ್ಟಿ ಕಲರ್ಸ್ ಕಲ್ಲಿನಿಂದ ಸಹ ಲಕ್ಷಾಂತರ ರೂಪಾಯಿ ಲೂಟಿಯಾಗುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಹಿಂದಿನ ಸರ್ಕಾರದವರು ಮೂರು ಜನರು ಇರುವಂಥಹ ಒಂದು ಕಮಿಟಿ ಮಾಡಿದ್ದಾರೆ. ನಾನಾದರೂ ಹೇಳುತ್ತೇನೆ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕರಿಗೆ ಆ ಕಲ್ಲಿನ ಬಗ್ಗೆ ಏನೇನೂ ಗೊತ್ತಿಲ್ಲ. ಅಲ್ಲಿಗೆ ಒಬ್ಬ ಐ.ಎ.ಎಸ್. ಅಧಿಕಾರಿಯನ್ನು ಹಾಕಿದರೆ, ಅವರಿಗೆ ಬ್ಲಾಕ್ ಗ್ರಾನೈಟ್ ಎಂದರೇನು? ಮಲ್ಟಿಕಲರ್ಸ್ ಎಂದರೇನು, ಪಿಂಕ್ ಗ್ರಾನೈಟ್ ಎಂದರೇನು ಎಂಬುದೇ ಅವರಿಗೆ ಗೊತ್ತಾಗುವುದಿಲ್ಲ. ಆ ಸಮಿತಿಯಲ್ಲಿ 3 ಜನರು ಇರುತ್ತಾರೆ. ಅವರಲ್ಲಿ ಒಬ್ಬರು ಡೆಪ್ಯೂಟಿ ಸೆಕ್ರೆಟರಿಯವರು. ಅವರಿಗೆ ಈ ಕಲ್ಲಿನ ಬಗ್ಗೆ ಏನೇನೂ ಗೊತ್ತಿಲ್ಲ. ಇನ್ನೊಬ್ಬರು ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಇಲಾಖೆಯ ನಿರ್ದೇಶಕರು, ಅವರು ಐ.ಎ.ಎಸ್. ನವರು. ಅವರಿಗೂ ಕೂಡ ಈ ಕಲ್ಲಿನ ಬಗ್ಗೆ ಅನುಭವ ಇರುವುದಿಲ್ಲ. ಗಣಿ ಇಲಾಖೆಯಲ್ಲಿ ಟೆಕ್ನಿಕಲ್ ಆಗಿ ಯಾರಿಗೆ ಅನುಭವ ಇರುತ್ತದೋ ಅವರನ್ನು ಈ ಸಮಿತಿಯಲ್ಲಿ ಹಾಕಿಲ್ಲ, ಈ ರೀತಿ ಹಿಂದಿನ ಸರ್ಕಾರದವರು 3 ಜನರ ಸಮಿತಿಯನ್ನು ಈ ರೀತಿ ಮಾಡಿ ಸಾಕಷ್ಟು ಹಣ ಲೂಟಿಯಾಗುವುದಕ್ಕೆ ಅವಕಾಶವನ್ನು ಪೂಡಿ ಕೊಟ್ಟಿದ್ದರು. ಇದನ್ನು ಸರ್ಕಾರದ ಆದೇಶದ ಪ್ರಕಾರ ಮಾಡಿದ್ದಾರೆ. ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಅಂತರ್ಜಲ ವಿಭಾಗ ಇದೆ. ಆದರೂ ಬೋರ್‌ವೆಲ್ ಹಾಕುವುದಕ್ಕೆ ಕೊಯಮತ್ತೂರು ಮತ್ತು ತಮಿಳ್ನಾಡಿನವರಿಗೆ ಆರ್ಡರ್ ಕೊಡುತ್ತಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಅಂತರ್ಜಲ ವಿಭಾಗವಿದ್ದರೂ ಕೂಡ ಈ ಇಲಾಖೆಗೆ ಬೋರ್‌ವೆಲ್‌ಗಳನ್ನು ತೆಗೆಸುವುದಕ್ಕೆ ಅವಕಾಶ ಕೊಡುತ್ತಿಲ್ಲ. ಇವತ್ತು ಒಂದು ಬಾವಿಯನ್ನು ತೆಗೆಯಬೇಕಾದರೆ ಜಿಯಾಲಜಿಸ್ಟ್‌ನ ಸರ್ಟಿಫಿಕೇಟ್ ಬೇಕಾಗುತ್ತದೆ. ಇಡೀ ಜಿಲ್ಲೆಗೆ ಒಬ್ಬರೇ ಒಬ್ಬರು ಜಿಯಾಲಜಿಸ್ಟ್‌ನ್ನು ಹಾಕಿದ್ದಾರೆ, ಅವರು ಸರ್ಟಿಫಿಕೇಟ್ ಕೊಡದಿದ್ದರೆ ಬೋರನ್ನು ಹಾಕುವುದಕ್ಕಾಗುವುದಿಲ್ಲವೆಂದು ಬಾವಿಯನ್ನು ತೆಗೆಯುವುದಕ್ಕಾಗುವುದಿಲ್ಲ. ಇವತ್ತು ನಮ್ಮ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿರತಕ್ಕ ಅಂತರ್ಜಲ ವಿಭಾಗವನ್ನು ಮುಚ್ಚಿಸುವಂಥ ಜನರಿದ್ದಾರೆ. ಗಣಿ ಇಲಾಖೆ ಖಾತೆಗೆ ಈಗ ಹೊಸಮಂತ್ರಿಗಳು ಬಂದಿರುವುದರಿಂದ ಅವರು ಈ ವಿಚಾರಗಳನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಅಂತರ್ಜಲ ವಿಭಾಗದಲ್ಲಿದ್ದಂಥ ಆರಿಗಳು ಹೋಗಿವೆ. ಆ ವಿಭಾಗ ಮುಚ್ಚುವ ಸ್ಥಿತಿಯಲ್ಲಿದೆ. ೨೦೦ ಅಡಿ ಬೋರ್ ಕೊರೆದು ೪೦೦ ಅಡಿ ಕೊರೆದಿದ್ದೇವೆಂದು ಬಿಲ್ ಕೊಡುತ್ತಾರೆ...

ಅಧ್ಯಕ್ಷರು.—ನಿಮ್ಮ ಭಾಷಣಕ್ಕೆ ಇನ್ನೂ ಟೈಂ ಬೇಕಲ್ಲವೆ.

ಶ್ರೀ ಎಂ. ಪಿ. ವೆಂಕಟೇಶ್.—ಹೌದು.

ಅಧ್ಯಕ್ಷರು.—ಹಾಗಾದರೆ ಮುಂದಿನವಾರ ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ನಮ್ಮ ಖಾಸಗೀ ನಿರ್ಣಯಂಗಳಿಗೆ ತಾವು ಒಂದು ಸಮಯವನ್ನು ನಿಗದಿ ಮಾಡಬೇಕು. ತಾವು ಇದರಲ್ಲಿ ಇಂಟರ್‌ವೀನ್ ಆಗಬೇಕು. ನಾವು ತಮ್ಮ ಪ್ರೊಟೆಕ್ಷನ್‌ನ್ನು ಕೇಳುತ್ತೇವೆ. ನಾವು ಕಳುಹಿಸಿರತಕ್ಕದ್ದು ಬಹಳ ಮಹತ್ವದ ವಿಚಾರ, ಮಂಡಲ್ ಆಯೋಗದ ಬಗ್ಗೆ ಚರ್ಚೆಯಾಗಬೇಕು. ಇಡೀ ದೇಶದಲ್ಲಿ ಇದರ ಬಗ್ಗೆ ಚರ್ಚೆಯಾಗುತ್ತಿದೆ. ನಾವೆಲ್ಲರೂ ಇದರ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಯಾವ ವಿಚಾರದಲ್ಲಿ.

ಶ್ರೀ ಪಿ.ಜಿ ಆರ್. ಸಿಂಧ್ಯ.—ಮಂಡಲ್ ಆಯೋಗದ ವಿಚಾರದಲ್ಲಿ.

ಅಧ್ಯಕ್ಷರು.—ಆ ಚರ್ಚೆ ಮುಗಿದು ಹೋಯಿತಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ನಾನು ಖಾಸಗಿ ನಿರ್ಣಯವನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು.—ದೇಶದಲ್ಲಿ ಚರ್ಚೆ ಮುಗಿದು ಹೋಯಿತು.

ಶ್ರೀ ಪಿ.ಜಿ.ಆರ್, ಸಿಂಧ್ಯ.—ಮುಗಿದಿಲ್ಲ. ಈಗಿನ್ನೂ ಪ್ರಾರಂಭವಾಗಿದೆ. ಈ ಕಾರಣದಿಂದಲೇ ನಮ್ಮ ಸರ್ಕಾರವನ್ನು ಅಲ್ಲಿ ಕಳೆದುಕೊಂಡು ಇಲ್ಲಿ ಕೂತಿದ್ದೇವೆ.

ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಈಗ ರೂಲ್ಸ್ ಆಫ್ ಬಿಸಿನೆಸ್ ಪ್ರಕಾರ ನನ್ನ ನಿರ್ಣಯಕ್ಕೆ ಜೊತೆನೇ ಇಲ್ಲ ಕೊನೆಯ ಪಕ್ಷ ಈಗ ನಾನು ಮಂಡಿಸಿರತಕ್ಕ ಖಾಸಗಿ ನಿರ್ಣಯವನ್ನು ಜೀವಂತವಾಗಿ ಇಟ್ಟಿದ್ದೀರಾ ?

ಅಧ್ಯಕ್ಷರು.—ಅದು ಜೀವಂತವಾಗಿಯೇ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಜೀವಂತವಾಗಿ ಇಡಲಿಕ್ಕೆ ಸಾಧ್ಯವಿಲ್ಲ, ರೂಲ್ಸ್ ಆಫ್ ಬಿಸಿನೆಸ್ ಪ್ರಕಾರ.

ಅಧ್ಯಕ್ಷರು.—ನೋಟೀಸ್ ಕೊಡಿ ಆದಕ್ಕೆ ಜೀವ ತುಂಬೋಣ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈಗ ಇದರ ಮೇಲೆ ಎರಡು ನಿಮಿಷ ಮಾತನಾಡಿಬಿಡುತ್ತೇನೆ. ಇದಕ್ಕೆ ಜೀವ ಕೊಡಿ, ಮುಂದಿನ ಸಾರಿಯಾದರೂ ತೆಗೆದುಕೊಳ್ಳಲು ಅನುಕೂಲವಾಗುತ್ತದೆ.

ಅಧ್ಯಕ್ಷರು.—ಇದನ್ನು ಮೊದಲು ಮುಗಿಸಬೇಕಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಗ್ಯಾನ್ಯೆಟ್ ವ್ಯವಹಾರದ ಬಗ್ಗೆ ಸರ್ಕಾರದವರು ಏನೂ ಕ್ರಮ ತೆಗೆದುಕೊಂಡಿಲ್ಲ, ನಾವು ಎಷ್ಟೇ ಚರ್ಚೆ ಮಾಡಿದರೂ ಸಹ ಏನೂ ಕ್ರಮ ತೆಗೆದುಕೊಂಡಿಲ್ಲ. ಇದು ಸುಮನ್ನೆ ಅರಣ್ಯ ರೋದನವಾಗಿದೆ. ನನಗಂತೂ ಏನು ಅರ್ಥವಾಗುತ್ತಿಲ್ಲ. ಮಾನ್ಯ ಅಧ್ಯಕ್ಷರೇ ನಾನು ಪ್ರಾಮಾಣಿಕವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ, ಸರ್ಕಾರವನ್ನು ಟೀಕೆ ಮಾಡಬೇಕೆನ್ನುವ ಉದ್ದೇಶದಿಂದ ಇದನ್ನು ಹೇಳುತ್ತಿಲ್ಲ. ಎಲ್ಲಿಯಾದರೂ ಅವಕಾಶ ಸಿಕ್ಕಿದರೆ ನಾನು ಸರ್ಕಾರವನ್ನು ಹೊಗಳುತ್ತೇನೆ. ಆದರೆ ತೊಂದರೆಯಾಗಿರುವುದೇನೆಂದರೆ, ಕಳೆದ ಒಂದು ವರ್ಷದಲ್ಲಿ ನಿಮ್ಮ ಸರ್ಕಾರ ಬಂದಮೇಲೆ, ಮೊದಲಿನಿಂದಲೂ ಹೇಳುತ್ತಿದ್ದೇವೆ, ನಿರಂತರವಾಗಿ ಈ ದಂಧೆ ನಡೆಯುತ್ತಿದೆ. ಇದು ಏತಕ್ಕನ್ನುವುದು ನನಗೆ ಅರ್ಥವಾಗುತ್ತಿಲ್ಲ, ಹಿಂದಿನ ಮುಂಖ್ಯ ಮಂತ್ರಿಗಳು ಇದರ ಬಗ್ಗೆ ಭರವಸೆಯನ್ನು ಕೊಟ್ಟು ಬಿಟ್ಟರು, ನಿಮಗೆ ಮತ್ತೆ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಅಧಿವೇಶನ ಮುಗಿಯುವುದರೊಳಗಾಗಿ ಕರೆಸಿ ಎಲ್ಲವನ್ನು ಸರಿ ಮಾಡಿಬಿಡುತ್ತೇವೆಂದು ಹೇಳಿದ್ದರು. ಆದರೆ ಅವರೇ ಮುಗಿದು ಹೋದರು. ಹೋಗಲಿ, ಇದರ ಚರ್ಚೆಗೆ ಅರ್ಥವಾದರೂ ಏನಿದೆ ? ಯಾವ ಅರ್ಥವೂ ಇಲ್ಲ. ನಾವು ಸುಮ್ಮನೆ ಚರ್ಚೆ ಮಾಡಿಕೊಂಡು ಟೀ. ಎ. ಡಿ. ಎ. ತೆಗೆದುಕೊಂಡು ಹೋಗುವುದಕ್ಕೆ ಬಂದಿದ್ದೇವೆಯೇ ? ಇದರಲ್ಲಿ ಏನಾಗಿದೆ ಎಂದರೆ ಗ್ಯಾನ್ಯೆಟ್ ಕಲ್ಲಿನ ಬಗ್ಗೆ ಇವರು ಮಾತನಾಡಿ ಬಾಯಿಚಟ ತಿರಿಸಿಕೊಳ್ಳಬೇಕಾಗಿದೆ, ಅಥವಾ ಏನೋ ಒಳಗೆ ವ್ಯವಹಾರ ನಡೆಯುತ್ತಿರಬಹುದು, ಆದ್ದರಿಂದ ಅವರು ಮಾತನಾಡಿಕೊಳ್ಳುತ್ತಿದ್ದಾರೆಂಬ ಗುಮಾನಿ ಎಲ್ಲರ ಮೇಲೆಯೂ ಬರತಕ್ಕಂಥ ಒಂದು ಪ್ರಸಂಗ ಬಂದಿದೆ.

(ಗೊಂದಲ)

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಸಭಾಧ್ಯಕ್ಷರೆ, ಫೋಟೋ ಕೂಡ ಹಾಕಿದ್ದರು ಇದರಲ್ಲಿ.

ಶ್ರೀ ಪಿ. ಜಿ. ಆರ್. ಸಿಂಧ್ಯ —ನನಗೆ ಗೊತ್ತಿದೆ ಆ ವಿಚಾರ, ಇದರಲ್ಲಿ ಯಾರು ಯಾರು ಇದ್ದಾರೆಂದು ಮಾನ್ಯ ಸಭಾಧ್ಯಕ್ಷರ ಹೆಸರನ್ನು ಏತಕ್ಕೆ ತೆಗೆದುಕೊಳ್ಳುತ್ತೀರಿ ? ಅವರಿಗೆ ಬುದ್ಧಿ ಇಲ್ಲ

ಮಾತಾಡಿದ್ದಾರೆ ಅಷ್ಟೇ. ಸಭಾಧ್ಯಕ್ಷರ ಹೆಸರನ್ನು ತೆಗೆದುಕೊಳ್ಳಬೇಡಿ ನನಗೆ ಗೊತ್ತಿದೆ ಅದರ ಹಿಂದುಗಡೆ ಯಾರು ಯಾರಿದ್ದಾರೆಂದು ಇದರ ಬಗ್ಗೆ ಚರ್ಚೆ ಮಾಡುತ್ತಿರುವುದು ಬಹುಶಃ ಇದು ನಾಲ್ಕನೇ ವಾರ ಇರಬಹುದು ಈ ಔಸಗಿ ನಿರ್ಣಯವನ್ನು ಮಾನ್ಯ ಪಾಟೀಲ್ ನಾಗರಾಜ್‌ರವರು ತೆಗೆದುಕೊಂಡು ಬಂದಿರುವುದು. ಈಗ ಏನಾಗಿದೆ ಎಂದರೆ ಕನ್ನಡದಲ್ಲಿಯೇ ಎಲ್ಲರೂ ಮಾತನಾಡಬೇಕು, ಕನ್ನಡದಲ್ಲಿಯೇ ಪ್ರಶ್ನೆಗಳು ಇರಬೇಕು, ಕನ್ನಡದಲ್ಲಿಯೇ ಎಲ್ಲ ವ್ಯವಹಾರಗಳು ಆಗಬೇಕೆಂದು ಹೇಳಿದರೂ ಸಹ ಇಂಗ್ಲೀಷ್‌ನಲ್ಲಿಯೇ ಎಲ್ಲ ಬರುತ್ತಿದೆ. ಇಲ್ಲಿ ಬೆಳಿಗ್ಗೆ ರೆವಿನ್ಯೂ ಸಚಿವರು ತಮ್ಮ ಸರ್ಕಾರದ ಒಂದು ಧೋರಣೆಯನ್ನು ಇಂಗ್ಲೀಷ್‌ನಲ್ಲಿಯೇ ಮುದ್ರಣ ಮಾಡಿಸಿ ಓದಿದರು. ಈಗ ಮಾನ್ಯ ಪಾಟೀಲ್ ನಾಗರಾಜ್‌ರವರು ಸಹಿತ ಅದನ್ನು ಕೇಳುವುದು ಕಡಿಮೆ ಮಾಡಿಬಿಟ್ಟರು ಪಾಟೀಲ್ ನಾಗರಾಜ್‌ರವರಿಗೆ ಇದೊಂದು ಹುಚ್ಚು, ಅವರಿಗೆ ಕನ್ನಡದ ಹುಚ್ಚು ತಗಲಿದೆ ಅವರಿಗೂ ಕೇಳಿ ಕೇಳಿ ಸಂಸ್ಕಾರಗಿದೆ. ಎನ್ನುವ ಮಾತನ್ನು ಆಕಡೆಯವರು ಹೇಳಿದರು. ಹಾಗಾಗಬಾರದು. ತಾವು ಒಂದು ಖಚಿತವಾದ ಆಶ್ವಾಸನೆಯನ್ನು ಕೊಡಿ. ಖಾಸಗಿ ನಿರ್ಣಯದ ಚರ್ಚೆ ಅದರ ವ್ಯಾಪ್ತಿ, ಮತ್ತು ಅದನ್ನು ವಿತ್‌ಡ್ರಾ ಮಾಡಿಕೊಳ್ಳುವುದು, ನೀವು ಹೇಳುವುದು ನಾವು ಕೇಳುವುದು ಇದ್ದೇ ಇದೆ ಆದರೆ ಸರ್ಕಾರದ ಸಂಪತ್ತು, ದೇಶದ ರಾಜ್ಯದ ಸಂಪತ್ತು ಕೊಳ್ಳೆಯಾಗುತ್ತಿರತಕ್ಕಂಥ ಸಂದರ್ಭದಲ್ಲಿ ನೀವು ಏನನ್ನಾದರೂ ಇಂಟರ್‌ವಿನ್ ಆಗಿ ಇಂಟರ್‌ವಿನ್ ಆಗಿ ಏನಾದರೂ ಒಂದು ಕ್ರಮ ತೆಗೆದುಕೊಳ್ಳಿ ಇನ್ನು ಫಾರೆಸ್ಟ್ ಬಗ್ಗೆ ನಾನು ಹೇಳಿದೆ. ಈಗ ಏನಾಗಿದೆ ಅಂದರೆ ಮಾನ್ಯ ಬಸವಲಿಂಗಪ್ಪನವರು ಒಂದು ರೀತಿ ಪರ್ಸನಲ್ ಆಗಿ ಎಲ್ಲ ವ್ಯವಹಾರಗಳನ್ನು ತೆಗೆದುಕೊಂಡು ಬಿಟ್ಟಿದ್ದಾರೆ. ನಾನು ಒಂದು ಕಾಗದವನ್ನು ಬರೆದು ಕಳಿಸಿ ಕೊಟ್ಟಿದ್ದೆಕೆ. ಆ ಕಾಗದವನ್ನು ಅವರ ಮುಂದೆ ಇಟ್ಟಾಗ ಅವರು ಅದನ್ನು ಹರಿದು ಹೋಗಯ್ಯ ಎಂದು ಹೇಳಿದರಂತೆ, ಒಬ್ಬ ಶಾಸಕರಿಗೆ ಇದೇ ಇವರು ಕೊಡತಕ್ಕಂಥ ಗೌರವ. ಇದನ್ನೆಲ್ಲ ನಾವು ನುಂಗುತ್ತೇವೆ. ನಾವು ಆ ಕಡೆ ಕುಳಿತಾಗ ಈ ರೀತಿ ಮಾಡಿರಲಿಲ್ಲ. ಆದರೆ ನಾವು ಈ ಕಡೆ ಕುಳಿತು ಕೊಂಡಿರುವಾಗ ಅದನ್ನೆಲ್ಲ ನುಂಗುತ್ತೇವೆ. ನನ್ನ ಎದುರಿಗೆ ಹರಿದಿದ್ದರೆ ಅದು ಬೇರೆ ಪ್ರಶ್ನೆ ಆಗುತ್ತಿತ್ತು ಅದಿರಲಿ, ಇದನ್ನೆಲ್ಲ ಹೇಳಿಕೊಂಡು ವಿರೋಧಪಕ್ಷದಲ್ಲಿ ಕುಳಿತುಕೊಂಡಿರುವುದರಿಂದ ಈ ರೀತಿ ಮಾತನಾಡಂತಾರೆಂದು ಹೇಳಬಹುದು, ಆದರೆ ಪ್ರಶ್ನೆ ಅದಲ್ಲ ನನ್ನ ಈ ಸರ್ಕಾರ ಏನು ಮಾಡುತ್ತಿದೆ. ಕ್ಷೇತ್ರದ ಬಗ್ಗೆ ಜನರಿಗೆ ಏನು ಉತ್ತರ ಕೊಡಲಿ. ನಿರಂತರವಾಗಿ ಒಂದು ದಿವಸಕ್ಕೆ ೧೦೦-೧೫೦ ಲಾರಿ ಕಲ್ಲುಗಳು ಕೇವಲ ಒಂದು ತಾಲ್ಲೂಕಿನಿಂದಲೇ ಹೋಗುತ್ತಿದೆ. ಆದ್ದರಿಂದ ನಾವು ತಂದಿರುವ ಈ ನಿರ್ಣಯಕ್ಕೆ ಏನು ಅರ್ಥ ಇದೆ ಈ ಚರ್ಚೆಗೆ ಏನು ಅರ್ಥ ಇದೆ. ಇನ್ನೂ ಅನೇಕ ಕಡೆಯಿಂದ ಕಲ್ಲುಗಳು ಹೋಗುತ್ತಿದೆ. ಜನರು ಏನಾದರೂ ಈ ವ್ಯವಸ್ಥೆ ಬಗ್ಗೆ ನಂಬಿಕೆ ಇಟ್ಟು ಕೊಳ್ಳುತ್ತಾರಾ ? ದಯವಿಟ್ಟು ನನಗೆ ಇದರ ಬಗ್ಗೆ ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ಖಾಸಗೀ ನಿರ್ಣಯದ ಬಗ್ಗೆ ನಡೆದಿರತಕ್ಕ ಚರ್ಚೆ ಪ್ರಯೋಜನಕ್ಕೆ ಬರುವುದಿಲ್ಲವೆಂದು ತಮ್ಮ ವಾದ ಆದರೆ ನಾವು ಅದನ್ನು ಒಪ್ಪುವುದಿಲ್ಲ. ಏಕೆಂದರೆ ನಾವು ಆದರ ಬಗ್ಗೆ ಗಮನ ಕೊಡುತ್ತಿದ್ದೇವೆ ಅನೇಕ ಹೊಸ ಹೊಸ ವಿಚಾರಗಳನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದರ ಮೇಲೆ ನಾವು ಒಪ್ಪುತ್ತೇವೆ. ಆದಕ್ಕೆ ಸರ್ಕಾರ ಸ್ಪಂದಿಸಬೇಕು, ಇಲ್ಲದಿದ್ದರೆ ಅದು ಅರಣ್ಯ ರೋಧನವಾಗುತ್ತದೆಂಬುದನ್ನು ಒಪ್ಪುತ್ತೇನೆ, ಆದರೆ ತಾವು ಅಷ್ಟು ಹತಾಶರಾಗಬೇಕಾವ ಅವಶ್ಯಕತೆ ಇಲ್ಲ. ತಾವು ಏನು ಕೆಲವು ವರ್ತಮಾನ ಕೊಟ್ಟಿದ್ದೀರಿ ೧೦೦-೧೫೦ ಲಾರಿ ಗ್ರಾನೈಟ್ ಕಲ್ಲು ತಮ್ಮ ಕ್ಷೇತ್ರದಿಂದ ಹೋಗುತ್ತಿದೆ ಎಂದು. ಅದೇ ರೀತಿಯಲ್ಲಿ ವ್ಯಾಪಕವಾಗಿ ಇಂಥ ಕಳ್ಳತನ. ಲೂಟಿ ಆಗುವುದು ಇದ್ದರೆ. ಅದನ್ನು ತಕ್ಷಣ ನಿಲ್ಲಿಸತಕ್ಕ ಎಲ್ಲಾ ಕೆಲಸವನ್ನು ನಾವು ಮಾಡುತ್ತೇವೆ. ಅದನ್ನು ಖಂಡಿತವಾಗಿ ನಿಲ್ಲಿಸುತ್ತೇವೆ. ಏಕೆಂದರೆ ಕೆಲವು ಸಾರಿ ರೆವಿನ್ಯೂ ಅಧಿಕಾರಿಗಳ ಪಿತೂರಿಯಿಂದ ಆಗಂತ್ತದೆ. ಮತ್ತಂತ್ತ ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನವರ ಪಿತೂರಿಯಿಂದ ಆಗುತ್ತದೆ. ಅವರ ಶಾಮೀಲು ಇಲ್ಲದೆ ಆಗುವುದಿಲ್ಲ. ಈ ಸಂದರ್ಭದಲ್ಲಿ, ಸರ್ಕಾರದ ಪರವಾಗಿ ಒಂದು ಆಶ್ವಾಸನೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಯಾರೇ ಆಗಲಿ. ಎಲ್ಲಿ ನಡೆಯಲಿ. ಅಂಥ ಯಾವ ಪ್ರಭಾವಕ್ಕೂ ಸರ್ಕಾರ ಒಳಗಾಗುವುದಿಲ್ಲ. ಆ ಬಗ್ಗೆ ತುರ್ತು ಕಾರ್ಯಕ್ರಮ ತೆಗೆದುಕೊಂಡು. We will appoint a special Task Force of consisting officers and people of highest integrity and stop this kind of exploitation. We must wait and see the result, I would like to give this assurance to this House,

ಅಧ್ಯಕ್ಷರು.--ಈಗ ಮೂರುವರೆ ಗಂಟೆ ಕಾಲ ಚರ್ಚೆ ನಡೆದಿದೆ. ಇನ್ನು ಒಂದು ಗಂಟೆಯಲ್ಲಿ ಈ ಚರ್ಚೆಯನ್ನು ಮುಗಿಸಬಹುದಲ್ಲ. ಆ ಮೇಲೆ ಮುಂದಿನ ನಿರ್ಣಯ ತೆಗೆದುಕೊಳ್ಳಬಹುದಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ:--ಇದನ್ನು ನಾನಾಗಲಿ, ಈ ಕಡೆ ಕುಳಿತಿರತಕ್ಕ ಇತರೇ ಸದಸ್ಯರಾಗಲಿ, ಮಾತಿನ ಚಟ ತೀರಿಸಿಕೊಳ್ಳುವುದಕ್ಕೆ ಬಂದಿಲ್ಲ, ಪ್ರಾಮಾಣಿಕವಾಗಿ ಮಾನ್ಯ ಮಂತ್ರಿಗಳಾದ ಮೊಯ್ಲಿಯವರು ಏನು ಆಶ್ವಾಸನೆ ಕೊಟ್ಟಿದ್ದಾರೆ. ಆದರಂತೆ ಈ ಅಧಿವೇಶನ ಮುಗಿಯುವುದರೊಳಗೆ ಕ್ರಮ ಕೈಗೊಳ್ಳಬೇಕಂ. ಇದು ಅಷ್ಟೊಂದು ಸುಲಭವಲ್ಲ. ಅಧಿಕಾರಿಗಳ ಕಲ್ಯೂಷನ್ ಇಲ್ಲದೆ ಇದೆಲ್ಲ ನಡೆಯುವುದಿಲ್ಲ. ಈ ವಿಚಾರದ ಬಗ್ಗೆ ಗೊತ್ತಿರತಕ್ಕ ೪-೫ ಮಂದಿ ಶಾಸಕರು ಇದ್ದಾರೆ. ಪ್ರೊ. ನಂಜುಂಡಸ್ವಾಮಿ, ವಾಟಾಳ್ ನಾಗರಾಜ್ ಮತ್ತು ಮಾನ್ಯ ವೆಂಕಟೇಶ್ ಅವರ ಹತ್ತಿರ ಮಾಹಿತಿಗಳು ಇರಬಹುದು. ಆ ಕಡೆಯ ಕೆಲವು ಸದಸ್ಯರ ಹತ್ತಿರವೂ ಮಾಹಿತಿಗಳು ಇರಬಹುದು. ಇಂತಹ ಐದಾರು ಜನ ಶಾಸಕರನ್ನು ಕರೆಸಿ, ಸಂಬಂಧಪಟ್ಟ ಮಂತ್ರಿಗಳನ್ನು ಹಾಗೂ ಹಿರಿಯ ಮಂತ್ರಿಗಳನ್ನು ಮತ್ತು ಅಧಿಕಾರಿಗಳನ್ನು ಕರೆಸಿ ಮಾತನಾಡಿದರೆ ಇದನ್ನು ಎರಡು ದಿನಗಳೊಳಗಾಗಿ ಬಿಗಿ ಮಾಡಬಹುದು. ಈ ಅಧಿವೇಶನದಲ್ಲೇ ಬಿಗಿ ಮಾಡುವ ಭರವಸೆ ನಮಗೆ ಕೊಡಿ, ನಾವು ಯಾರೂ ಮಾತನಾಡುವ ಅಗತ್ಯ ಇಲ್ಲವೆಂದು ನಾನು ನನ್ನ ಪರವಾಗಿ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.--ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸದಸ್ಯರು ಒಂದೆರಡು ದಿನ ಅವಕಾಶ ಮಾಡಿಕೊಡುವುದು ಇದ್ದರೆ ನಾವು ಸೋಮವಾರ ಸಭೆಯನ್ನು ಎರ್ಪಾಡು ಮಾಡಿ, ತಮ್ಮ ಹತ್ತಿರ ಇರತಕ್ಕ ಮಾಹಿತಿಯನ್ನು ತೆಗೆದುಕೊಂಡು ಮತ್ತು ಯಾವ ರೀತಿ ಕಾರ್ಯಾಚರಣೆ ಮಾಡಬಹುದೆಂದು ತಮ್ಮ ಅನುಭವವನ್ನು ತೆಗೆದುಕೊಂಡು, ಆದರ ಮೇಲೆ ನಾವು ವಿಶೇಷ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು,--ಈಗ ಸಭೆ ಮುಂದುವರಿದು ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಮತ್ತೆ ಸಮಾವೇಶಗೊಳ್ಳುವುದು.

ಸದನವು ಮಧ್ಯಾಹ್ನ ೧ ಗಂಟೆ ೩೮ ನಿಮಿಷಕ್ಕೆ ಮುಂಕ್ತಾಯವಾಗಿ ಪುನಃ ೨೬ನೇ ನವೆಂಬರ್ ೧೯೯೦ರ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಿತು,